ಪೋಟ್ಲೂರಿ ಸುಬ್ರಮಣ್ಯಂ ನಿವೃತ್ತ ತಹಸೀಲ್ದಾರರು. ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ದಾಮವರಂ ಗ್ರಾಮದವರು (ಜನನ: 28 ಫೆಬ್ರುವರಿ 1953). ಪ್ರಸ್ತುತ ನೆಲ್ಲೂರು ನಿವಾಸಿ. ಸಮಾಜಶಾಸ್ತ್ರ, ಜ್ಯೋತಿಷ ಮತ್ತು ಪ್ರವಾಸೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಸಿನಿಮಾ ಬರವಣಿಗೆಯಲ್ಲಿ ಡಿಪ್ಲೊಮಾ ಗಳಿಸಿದ್ದಾರೆ.

ಇದ್ದದ್ದನ್ನು ಕಂಡು ಸಮಾಧಾನ ಪಟ್ಟ. ಆತನ ಮೈ ಮೇಲೆ ಕಿಂಚಿತ್ತು ಬಟ್ಟೆಯೂ ಇರಲಿಲ್ಲ! ಸೊಂಟಕ್ಕೆ ಕಾಡಿನ ಬಳ್ಳಿಗಳೊಂದಿಗೆ ಕೂಡಿದ ಎಲೆಗಳನ್ನು ಕಟ್ಟಿಕೊಂಡು ಮಾನವನ್ನು ಕಾಪಾಡಿಕೊಂಡಿದ್ದಾನೆ!.

ಕಡಲುಗಳ್ಳನ ಎರಡೂ ಕಂಕುಳ ಕೆಳಕ್ಕೆ ಕೈ ಹಾಕಿ ಆತನನ್ನು ಮರಳಿನ ಮೇಲಿನ ಪ್ರದೇಶಕ್ಕೆ ಎಳೆದೊಯ್ದು ಮಲಗಿಸಿದ. ಹೆಗಲ ಮೇಲಿನ ಬಟ್ಟೆಯಿಂದ ಅವನ ಮುಖವನ್ನು ಒರೆಸಿದ. ಮರಳಿನ ಕಣಗಳು ಗಾಳಿಗೆ ಹಾರಿ ಬಂದು ಬೀಳಬಾರದೆಂದು ತೆರೆದುಕೊಂಡಿದ್ದ ರೆಪ್ಪೆಗಳನ್ನು ಕೆಳಕ್ಕೆ ಎಳೆದು ಮುಚ್ಚಿದ. ಪಶ್ಚಿಮ ದಿಕ್ಕಿನಲ್ಲಿ ಅಸ್ತಮಿಸುತ್ತ ಸೂರ್ಯ ಸಿಂಧೂರ ವರ್ಣದಲ್ಲಿ ಕಂಗೊಳಿಸುತ್ತಿದ್ದಾನೆ. ಬಲೆಯನ್ನು ಅಲ್ಲಿಯೇ ಒಣಗಲು ಹಾಸಿ, ಮೀನಿನ ಬುಟ್ಟಿಯನ್ನು ಹೊತ್ತು ಭರಭರನೆ ಅಲ್ಲಿಂದ ಅರ್ಧ ಕಿಲೋ ಮೀಟರು ದೂರದಲ್ಲಿರುವ ಬೆಸ್ತರ ಪಾಳ್ಯಕ್ಕೆ ಓಡತೊಡಗಿದ. ಮೀನಿನ ಬುಟ್ಟಿಯನ್ನು ಮನೆಯಲ್ಲಿ ಕೊಟ್ಟು ಪಟ್ಟ ಕಟ್ಟಿಸಿಕೊಂಡಿದ್ದ ಕುಲದೊಡೆಯನ ಮನೆ ತಲುಪಿ ವಿಷಯವನ್ನು ತಿಳಿಸಿದ. ಆತ ಊರೆಲ್ಲ ಡಂಗುರ ಸಾರಿಸಿದ.

ಕಡಲಿನ ತೀರಕ್ಕೆ ಬಂದಿದ್ದಾನೆಂದು ತಿಳಿದ ಕೂಡಲೇ ಬೆಸ್ತರೆಲ್ಲ ಕೈಗೆ ಸಿಕ್ಕ ಕತ್ತಿ, ಕಠಾರಿ, ದೊಣ್ಣೆ ಹಿಡಿದು ಊರ ನಡುವೆ ತೆಂಗಿನ ಗರಿಗಳಿಂದ ನಿರ್ಮಿಸಿದ್ದ ರಾಮಾಲಯವನ್ನು ತಲುಪಿದರು. ಕುಮಾರಪ್ಪ ಮುಂದೆ ಹೆಜ್ಜೆ ಹಾಕುತ್ತಿದ್ದರೆ ಹಿಂದೆ ಕುಲದೊಡೆಯ, ಆತನ ಹಿಂದೆ ಊರ ಪ್ರಜೆಗಳು, ಮಕ್ಕಳು ಮರಿ ಎಲ್ಲ ಗದ್ದಲ ಎಬ್ಬಿಸುತ್ತ ಕೇಕೆ ಹಾಕುತ್ತ ಗುಂಪು ಗುಂಪಾಗಿ ಬರುತ್ತಿದ್ದಾರೆ. ಕಡಲುಗಳ್ಳನನ್ನು ತೀರಕ್ಕೆ ಸೇರಿಸಿದ್ದಕ್ಕೆ ಎಲ್ಲರೂ ಕುಮಾರಪ್ಪನನ್ನು ಬೈಯುತ್ತಿದ್ದಾರೆ. ಎಲ್ಲರೂ ಅಲ್ಲಿಗೆ ಸೇರಿದಾಗ ಆ ಕಳ್ಳ ಹಾಗೆಯೇ ಮಲಗಿದ್ದ. ಸುತ್ತ ಜನ ಮುಕುರಿದರು. ಆತನ ತಲೆಯನ್ನು ಅತ್ತಿತ್ತ ತಿರುಗಿಸಿ ಎಲ್ಲ ರೀತಿಯಿಂದಲೂ ಪರೀಕ್ಷಿಸಿದ ಕುಲದೊಡೆಯ, 'ಇವನು ಕಡಲುಗಳ್ಳನಲ್ಲ, ಯಾರೋ ಹುಚ್ಚ, ಸಮುದ್ರಕ್ಕೆ ಧುಮುಕಿರುತ್ತಾನೆ' ಎಂದ.

ಎಲ್ಲರೂ ನಿಟ್ಟುಸಿರಿಟ್ಟರು. ಕುಲದೊಡೆಯ ಆತನ ಗುಬುರು ಮೀಸೆ, ಗಡ್ಡದಿಂದ ಮುಚ್ಚಿಕೊಂಡಿದ್ದ ಮೂಗಿನ ಬಳಿ ಬಹಳ ಕಷ್ಟದಿಂದ ಬೆರಳಿಟ್ಟು ಪರೀಕ್ಷಿಸಿದ.'ಇವನು ಬದುಕೇ ಇದ್ದಾನೆ' ಎಂದ.

ಮತ್ತೆ ಆತನೇ 'ನಮಗಿಲ್ಲೇನು ಕೆಲಸ? ನಡೀರಿ ಹೋಗೋಣ' ಎಂದ. ಎಲ್ಲರೂ, 'ಅಯ್ಯೋ ರಾಮ' ಎನ್ನುತ್ತಾ ಹಳ್ಳಿಗೆ ಹಿಂತಿರುಗಿದರು.

ಮನೆಗೆ ಬಂದ ಕುಮಾರಪ್ಪ ಅವನ ತಾಯಿಯನ್ನು ಕುರಿತು, 'ಯಾಕೋ, ಆ ಹುಚ್ಚನನ್ನು ನೋಡಿದರೆ ಪಾಪ ಅನ್ನಿಸುತ್ತದೆ ಕಣಮ್ಮ, ರಾತ್ರಿಗೆ ಯಾವ ನಾಯಿ ನರಿಗಳೋ ಬಂದು ಕಿತ್ತು ತಿನ್ನುತ್ತವೇನೋ ಎಂದು ಹೆದರಿಕೆಯಾಗುತ್ತಿದೆ. ಉಸಿರಾಡುತ್ತಿದ್ದರೂ ಏಳುವ ತ್ರಾಣವಿಲ್ಲವಲ್ಲ. ಬಳ್ಳದಲ್ಲಿ ಒಂದಿಷ್ಟು ಗಂಜಿ ಕೊಡಮ್ಮ, ಹೋಗಿ ಕುಡಿಸಿ ಬರುತ್ತೇನೆ' ಎಂದ.

ತಾಯಿ ಮುತ್ತು ಲಕ್ಷ್ಮಿಯ ಅಪ್ಪಣೆಯಂತೆ ಕುಮಾರಪ್ಪನ ಹೆಂಡತಿ ಬಳ್ಳದ ತುಂಬಾ ರಾಗಿ ಅಂಬಲಿ ಸುರಿದು ಕೊಟ್ಟಳು. ಅದನ್ನು ನೆಲ್ಲಿನಂತೆ ಹಗ್ಗದಿಂದ ಬಿಗಿದು ಒಂದು ಕೋಲಿಗೆ ಕಟ್ಟಿಕೊಂಡು ಹೆಗಲ ಮೇಲೆ ಹೊತ್ತು ಆ ಕತ್ತಲಿನಲ್ಲಿ ಒಂದು ಲಾಟೀನನ್ನು ಹಿಡಿದುಕೊಂಡು ಕಡಲ ತೀರಕ್ಕೆ ಹೊರಟ ಅವನು.

ಐದಾರು ನರಿಗಳು ಹುಚ್ಚನ ಸುತ್ತ ಮುತ್ತಿಕೊಂಡು ಮೂಸುತ್ತಿರುವುದು ದೂರದಿಂದಲೇ ಕಾಣಿಸಿತು. ಲಾಟೀನು ಬೆಳಕಿಗೆ ಅವುಗಳ ಕಣ್ಣು ವಿಚಿತ್ರವಾಗಿ ಹೊಳೆಯುತ್ತಿವೆ. ಅವನು ಹೆಗಲ ಮೇಲಿನ ದೊಣ್ಣೆಯನ್ನು ಕೈಗೆ ತೆಗೆದುಕೊಂಡ ಕೂಡಲೇ ಅವು ಅಲ್ಲಿಂದ ಕಾಲು ಕಿತ್ತವು.

ಕಡಲಿನ ಮರಳ ಮೇಲೆ ಹುಚ್ಚ ಹಾಗೆಯೇ ಮಲಗಿದ್ದಾನೆ. ಲಾಟೀನಿನ ಬೆಳಕು ಚೆನ್ನಾಗಿ ಬೀಳುವ ಹಾಗೆ ಅದನ್ನು ತೀರದ ತೆಪ್ಪ ಒಂದರ ಮೇಲೆ ಇಟ್ಟು